


## ರಿಯಾಲಿಟಿ ಷೋ ಲೇಖನ ಮಾಹಿತಿಪೂರ್ಣ

ಮಾ.21ರ ಸಂಚಿಕೆಯ 'ರಿಯಾಲಿಟಿ ಷೋ ಜನಸಾಮಾನ್ಯರ ಅಕ್ಷಯಪಾತ್ರೆ' (ರಾಘವೇಂದ್ರ ಕೆ.) ಲೇಖನ ಸಕಾಲಿಕ, ಮಾಹಿತಿಪೂರ್ಣವಾಗಿದೆ. ಖಾಸಗಿ ಕಾನ್ವೆಂಟ್ ಶಾಲೆಗಳು ನಡೆಸುವ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನ ಪರೋಕ್ಷವಾಗಿ ರಿಯಾಲಿಟಿ ಷೋನೇ ಆಗಿರುತ್ತದೆ. ಪೋಷಕರದೇ ಹಣದಲ್ಲಿ ಅವರ ಮಕ್ಕಳನ್ನು ಅದ್ದೂರಿ ವೇದಿಕೆಯಲ್ಲಿ ಕುಣಿಸಿ ಪೋಷಕರಲ್ಲಿ ಸ್ಪರ್ಧಾ ಮನೋಭಾವ ಬೆಳೆಸುವುದಲ್ಲದೆ ಇತರರೂ ಅದೇ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸುವಂತೆ ಪ್ರಭಾವ ಬೀರುವ ಉದ್ದೇಶವೂ ಅವಕ್ಕಿರುತ್ತದೆ. ಇದು ತಮ್ಮ ಆದಾಯ ಹೆಚ್ಚಿಸಿಕೊಳ್ಳಲು ಸುಲಭ ದಾರಿಯೂ ಆಗುತ್ತದೆ. ಖಾಸಗಿ ಶಾಲೆಯ ಥಳಕಿನ ಹುಚ್ಚಿನ ಪೋಷಕರು ಈ ಸೂಕ್ಷ್ಮ ಅರಿಯುವುದು ಒಳ್ಳೆಯದು.

—ಟಿ. ಗೋವಿಂದರಾಜು, ಬೆಂಗಳೂರು

## ಹಳ್ಳಿಗಾಡಿನ ಪ್ರತಿಭೆಗಳು

'ರಿಯಾಲಿಟಿ ಷೋ' ಕುರಿತ ಲೇಖನ ಚೆನ್ನಾಗಿತ್ತು. ನಿಜವಾಗಿಯೂ ಕಾಮಿಡಿ ಕಿಲಾಡಿಗಳು, ಸರಿಗಮಪ, ಡ್ರಾಮಾ ಜ್ಯೂನಿಯರ್ ಮೂಲಕ ಹಳ್ಳಿಗಾಡಿನ ಎಷ್ಟೋ ಪ್ರತಿಭೆಗಳು ಮುಖ್ಯವಾಹಿನಿಗೆ ಪರಿಚಿತರಾದವರು. ಅವರಲ್ಲಿದ್ದ ಸುಪ್ತಪ್ರತಿಭೆ ವಿಕಸನವಾಗಲು ಈ ರಿಯಾಲಿಟಿ ಷೋಗಳೇ ದಾರಿಯಾಯಿತು. ನಾವೀಗ ವಾರದಾಂತ್ಯದ ಎರಡು ದಿನ ಸಂಜೆ ಸಿನಿಮಾ ನೋಡಲು ಸಹ ಹೋಗದೆ ಟಿ.ವಿ. ಮುಂದೆ ಇರುತ್ತೇವೆ.

—ಎಂ.ಎಸ್. ಇಂದಿರಾ, ಬೆಂಗಳೂರು

## ಪ್ರತಿಭೆ ಕುಗ್ಗಬಾರದು

ಇತ್ತೀಚೆಗೆ ಎಲ್ಲ ಜನಪ್ರಿಯ ಚಾನೆಲ್‌ಗಳು ವಿವಿಧ ರೀತಿಯ ರಿಯಾಲಿಟಿ ಷೋ ಗಳನ್ನು ಪ್ರಸಾರ ಮಾಡುತ್ತಿವೆ. ಇವು ಜನಪ್ರಿಯವೂ ಆಗಿವೆ. ಕೆಲ ಷೋಗಳಲ್ಲಿ ಪ್ರಧಾನವಾಗಿ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ. ಪುಟ್ಟ ಮಕ್ಕಳಿಂದ ಅನೇಕ ರೀತಿಯಲ್ಲಿ ಪೂರ್ವನಿಯೋಜಿತವಾಗಿ ಪ್ರೋಗ್ರಾಂ ಮಾಡಿ ಸ್ಟೇಜ್ ಮೇಲೆ ಕಾರ್ಯಕ್ರಮ ಪ್ರಸ್ತುತಪಡಿಸಲಾಗುತ್ತಿದೆ. ಇದರಿಂದ ಮಕ್ಕಳ ನೈಸರ್ಗಿಕ ಪ್ರತಿಭೆ ಕುಂದಿಸಿ, ಕೃತಕವಾಗಿ ನಟಿಸಲು ಹೇಳಿಕೊಡಲಾಗುತ್ತದೆ. ಡ್ರಾಮಾ ಜೂನಿಯರ್ಸ್ ಅಂತಹ ಷೋಗಳಲ್ಲಿ ಹೇಳಿಕೊಟ್ಟಂತೆ ಆಡುವ ಮಕ್ಕಳ ಆಟಕ್ಕೆ ನಗುವೇ ಬಾರದೆ, ಮಕ್ಕಳ ಬಗ್ಗೆ ಅಯ್ಯೋ ಎನ್ನುವಂತಾಗುತ್ತದೆ. ಮಕ್ಕಳನ್ನು ಅವರ ಸ್ವಾಭಾವಿಕ, ನೈಸರ್ಗಿಕ ಪ್ರತಿಭೆಗೆ ಒತ್ತು ನೀಡಿ ರಿಯಾಲಿಟಿ ಷೋಗಳನ್ನು ಕೊಟ್ಟರೆ ಚೆಂದ ಅಲ್ಲವೇ?

– ಶಾಂತವೀರ ಎಸ್., ಚಿತ್ರದುರ್ಗ, ಪುಷ್ಪಾ ಶ್ರೀರಾಮ್, ಶ್ರೀರಂಜನಿ ಬೆಂಗಳೂರು, ಎಚ್.ಆನಂದಕುಮಾರ್ ಚಿತ್ರದುರ್ಗ, ಎಂ.ಸುಬ್ಬಣ್ಣ, ವಿಜಯಕುಮಾರ್ ಬೆಂಗಳೂರು, ಮುಕುಂದ ಹೆರಕಲ್ಲ, ಕಲಬುರ್ಗಿ

## ನನಸಾದ ಕನಸು

'ಸವಿ ಸವಿ ನೆನಪು' ಅಂಕಣದಲ್ಲಿ ಜಯಪುರದ ಶಂ.ನ. ಶೇಷಗಿರಿ, ವರನಟ ರಾಜ್ ಕುಮಾರ್‌ರನ್ನು ಹತ್ತಿರದಿಂದ ನೋಡಿದ್ದು ಹಾಗೂ ತಾನು ಸಂಗ್ರಹಿಸಿದ ನುಡಿ ಚಿತ್ರಗಳಿಗೆ ಅವರಿಂದ ಸಹಿ ಪಡೆದು ಧನ್ಯನಾದ ಪರಿ ಖುಷಿಕೊಟ್ಟಿತು.

—ಪಿ. ಜಯವಂತ ಪೈ, ಕುಂದಾಪುರ

## ಉಪಯುಕ್ತ, ಅನುಸರಣೀಯ

ಡಾ. ವಿನಯ ಶ್ರೀನಿವಾಸ್ ಅವರ 'ಆರೋಗ್ಯಕರ ಮುಪ್ಪು ನಿಮ್ಮದಾಗಬೇಕೆ?' ಲೇಖನ ಮುಖ್ಯ ವಿಷಯಗಳನ್ನು ಸೂಕ್ತ ರೀತಿಯಲ್ಲಿ ಗ್ರಹಿಸಿ, ಗಮನಿಸಿ, ಅಗತ್ಯ ರೀತಿಯ ಕ್ರಮ–ನಿಯಮಗಳನ್ನು ಅನುಸರಿಸಿದರೆ, ಹಿರಿಯ ನಾಗರಿಕರಿಗೆ ಆಗುವ ಒಳಿತು–ಉಪಯುಕ್ತತೆಗಳ ವಿವರ ಮಾಹಿತಿಗಳಿಂದ ಕೂಡಿದೆ.

—ನಾ.ಕು. ಗಣೇಶ್, ಬೆಂಗಳೂರು, ಟಿ.ಎಂ. ಮಾನಪ್ಪ ಶಿವಮೊಗ್ಗ

## ಬಡವರ ದುಸ್ವಪ್ನ

'ಕದನವೆಂಬ ಬಡವರ ದುಃಸ್ವಪ್ನಗಳು' (ಡಾ.ಲಕ್ಷ್ಮಣ ವಿ.ಎ.) ಲೇಖನ ತಾಯಿ ಕರುಳು, ಮಡದಿ ಮನಸ್ಸು, ಸಹೋದರ ಧಮನಿಯನ್ನು ಕಲಕಿತು. ಮನಹೊಕ್ಕು ಕಸಿವಿಸಿ ಮಾಡಿತು. ಹೃದಯ ಹಿಂಡಿತು. ಯೋಧರ ಮನೆಯ ಜೀವಗಳಿಗಷ್ಟೇ ಅಲ್ಲ ಒಬ್ಬ ಸಾಮಾನ್ಯನೂ ಸಹ ಇದೇ ಮನಸ್ಥಿತಿಯಲ್ಲಿ ಇದ್ದಾನೆ. 'ಕಾರ್ಗಿಲ್‌ನಲ್ಲಿ ನೂರಾರು ಯೋಧರು ಸತ್ತರು ನಿಜ, ಆದರೆ ಪುಲ್ವಾಮಾದಲ್ಲಿ ಯುದ್ಧ ಮಾಡದೆಯೇ 44 ಜನ ಸತ್ತರಲ್ಲ ಇದನ್ನು ಯಾರಾದರೂ ಬಯಸಿದ್ದರೆ?' ಜನಸಾಮಾನ್ಯರ ರಕ್ತವೇ ಕುದಿಯುತ್ತಿರುವಾಗ ಸಹಪಾಠಿಗಳು ಕಣ್ಣ ಮುಂದೆ ಸತ್ತರೆ ಯೋಧರ ಮನಸ್ಥಿತಿ ಹೇಗಿರಬೇಡ?

—ರತ್ನಾ ಅಶೋಕ ಗೊರವರ, ಧಾರವಾಡ, ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ಜಿ.ಮೃತ್ಯುಂಜಯ, ಬೆಂಗಳೂರು

## ತಪ್ಪು ಮಾಹಿತಿಗಳಿವೆ

ಮುಪ್ಪು ಲೇಖನದಲ್ಲಿ ಕೆಲವು ತಪ್ಪು ಮಾಹಿತಿಗಳಿವೆ. ಉದಾಹರಣೆಗೆ 2002ರಲ್ಲಿ 605 ದಶಲಕ್ಷ ಇದ್ದದ್ದು 2025ರ ವೇಳೆಗೆ 12 ಕೋಟಿಯಾದರೆ ಏರಿಕೆ ಹೇಗಾಗುತ್ತದೆ? ಬದಲಿಗೆ ತುಂಬಾ ಇಳಿಕೆಯಾಯಿತಲ್ಲವೆ? ಪ್ರೋಸ್ಟೇಟ್ ಗ್ರಂಥಿಯ ಸಮಸ್ಯೆಗೆ ಕೇವಲ ಶಸ್ತ್ರಚಿಕಿತ್ಸೆ ಮಾತ್ರ ಪರಿಹಾರವಲ್ಲ ಅಲ್ಲವೇ? ಐವತ್ತು ವರ್ಷಗಳಿಗಿಂತ ಮೊದಲು ಮಧುಮೇಹ ಕಾಣಿಸಿಕೊಂಡಿದ್ದರೆ ಎಚ್ಚರಿಕೆಯ ಅಗತ್ಯವಿಲ್ಲವೆ?

—ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

## ಗಮನ ಸೆಳೆದವು

'ಅಯ್ಯೊ ಮರೆವು' (ಉಮಾ ಅನಂತ್), 'ಆರೋಗ್ಯಕರ ಮುಪ್ಪು ನಿಮ್ಮದಾಗಬೇಕೇ' ಹಾಗೂ 'ಕನಿಷ್ಠ ಧ್ಯಾನ ಗರಿಷ್ಠ ಲಾಭ' ಲೇಖನಗಳು ಗಮನ ಸೆಳೆದವು. . ಈ ಮೂರೂ ಲೇಖನಗಳ ಲೇಖಕರು ಬಹಳ ಸುಲಭವಾಗಿ ಮತ್ತು ಅತಿಸರಳವಾಗಿ ವಿಷಯವನ್ನು ಅಚ್ಚುಕಟ್ಟಾಗಿ ಮಿತಿಯಾದ ಪದಗಳಲ್ಲಿ ವಿವರಿಸಿದ್ದು ಪ್ರಶಂಸನಾರ್ಹ.

—ಎ.ಕೆ. ಅನಂತಮೂರ್ತಿ, ಬೆಂಗಳೂರು

## ಬದಲಾವಣೆಯ ಕಾಲ

'ಮರದ ಒಡವೆ ಟ್ರೆಂಡ್' ಲೇಖನ (ಆಶಾ ಎಸ್ ಕುಲಕರ್ಣಿ) ಚೆನ್ನಾಗಿದೆ. ಬದಲಾಗುತ್ತಿರುವ ಫ್ಯಾಷನ್ ಸನ್ನಿವೇಶದಲ್ಲಿ ಎಲ್ಲಾ ವರ್ಗದವವರಿಗೂ ಕೈಗೆಟುಕುವ ಬೆಲೆಯಲ್ಲಿ ದೊರಕುತ್ತಿರುವ ಈ ಆಭರಣ ಸ್ವಾಗತಾರ್ಹ. ಹಳೆಯ ಕನ್ನಡ ಚಿತ್ರಗೀತೆಯೊಂದರ ಸಾಲು 'ಬಂಗಾರದೊಡವೆ ಬೇಕೇ ನೀರೆ' ಎನ್ನುವುದನ್ನು ಕೊಂಚ ಬದಲಿಸಿ, 'ಮರದ ಒಡವೆ ಬೇಕೇ ನೀರೆ' ಎಂದು ಹಾಡಬಹುದೇನೋ. ದಿನೇ ದಿನೇ ಏರುತ್ತಿರುವ ಬಂಗಾರದ ಬೆಲೆ, ಸಾಮಾನ್ಯ ವರ್ಗದವರ ಕೈಗೆ ಎಟುಕದ ಕಾರಣ ಮರದ ಒಡವೆಗಳು ಸ್ವಲ್ಪ ಮಟ್ಟಿಗೆ ನೀರೆಯರ ಮನ ತಣಿಸಬಲ್ಲುದು.

– ಪ್ರಭಾ. ಎಸ್,ವಿಜಯನಗರ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in